**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.405/2023**

**CW -1 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶಿವಾಜಿ ಎಂ. ಹತ್ತಿ |
| ತಂದೆ | ಃ | ಮನೋಹರ್ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಹಿರಿಯ ಉಪನ್ಯಾಸಕರು, ರಾಯಚೂರು |
| ವಾಸಸ್ಥಳ | ಃ | ರಾಯಚೂರು. |
| ಪ್ರಮಾಣಿಕರಿಸಿದ ದಿನಾಂಕ | ಃ | **13-02-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ದಿ.03-03-2017 ರಿಂದ 04-02-2020 ರ ವರೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೇವದುರ್ಗ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

1 ನೇ ಆರೋಪಿ ಬಸವರಾಜ ಕವಟಗಿ, ಹಿರೆಕೂಡ್ಲಗಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2015 ರಿಂದ ಅಮಾನತ್ತು ಆಗುವವರೆಗೆ ಪ್ರಭಾರ ಮುಖ್ಯ ಗುರುಗಳು ಎಂದು ಕರ್ತವ್ಯ ನಿರ್ವಹಿಸುತ್ತಿದ್ದರು. 2 ನೇ ಆರೋಪಿ ಲಕ್ಕಪ್ಪ ತಂದೆ ವೀರುಪಾಕ್ಷಪ್ಪ ಸದರಿ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿದ್ದರು.

ಸದರಿ ಹಿರೆಕೂಡ್ಲಗಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನನ್ನ ವ್ಯಾಪ್ತಿಗೆ ಒಳಪಟ್ಟಿತ್ತು. ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ 2012 -2013 ನೇ ಸಾಲಿನಲ್ಲಿ ಹಿರೇಕೂಡ್ಲಗಿ ಕಿರಿಯ ಪ್ರಾಥಮಿಕ ಶಾಲೆಗೆ 2 ಶಾಲಾ ಕೊಠಡಿಗಳ ಸಲುವಾಗಿ ರೂ.5,27,000/- ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಅನುದಾನದ ಹಣ 2012-13 ನೇ ಸಾಲಿನಲ್ಲಿ ಸದರಿ ಶಾಲೆಯ ಜಂಟಿ ಖಾತೆಯಲ್ಲಿ ಬ್ಯಾಂಕಿಗೆ ಹಣ ಜಮಾ ಆಗಿರುತ್ತದೆ.

ದಿ.29-03-2016 ರಂದು ಅಂದಿನ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ. ವಿಜಯಕುಮಾರ್ ಜಮಕಂಡಿ ರವರು ಸದರಿ ಶಾಲೆಗೆ ಪರೀವೀಕ್ಷಣೆಗಾಗಿ ಹೋದಾಗ ಸದರಿ ಶಾಲೆಯಲ್ಲಿ 2012-13 ನೇ ಸಾಲಿನಲ್ಲಿ ಮಂಜೂರಾದ 2 ಶಾಲಾ ಕೊಠಡಿಗಳನ್ನು ಕಟ್ಟದೇ ಇದ್ದೀರುವುದು ಕಂಡು ಬಂದಿರುತ್ತದೆ. ಆ ಕುರಿತು ದಿ.16-04-2016 ರಂದು ಸದರಿ ವಿಜಯಕುಮಾರ್ ರವರು ದೇವದುರ್ಗದ ಬಿ.ಇ.ಓ ರವರಿಗೆ ಪತ್ರ ಮೂಲಕ ವರದಿ ನೀಡಿರುತ್ತಾರೆ. ಸದರಿ ವರದಿಯಲ್ಲಿ 1 ಮತ್ತು 2 ನೇ ಆರೋಪಿತರು ಶಾಲೆಯ ಜಂಟಿ ಖಾತೆಯಲ್ಲಿ ಇರುವ ಕಟ್ಟಡ ಅನುದಾನದ ರೂ.5,27,000/- ಹಣ ಮತ್ತು ಸದರಿ ಶಾಲೆಗೆ ವಿವಿಧ ಅನುದಾನಗಳು

ಬಿಡುಗಡೆ ಆಗಿದ್ದು ಒಟ್ಟು ರೂ.7,01,224/- 12 ಕಂತುಗಳಲ್ಲಿ 2015-16 ನೇ ಸಾಲಿನಲ್ಲಿ ಎಸ್.ಬಿ.ಎಂ. ದೇವದುರ್ಗ ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ಅನುದಾನವನ್ನು ಮಂಜೂರಾದ ಕಾಮಗಾರಿಗೆ ಬಳಸದೇ ಮೋಸ ಮಾಡಿರುವುದು ಕಂಡುಬಂದಿರುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಸದರಿ ವರದಿ ಆಧಾರದ ಮೇಲೆ ಬಿ.ಇ.ಓ ದೇವದುರ್ಗರವರು 1 ನೇ ಆರೋಪಿಯನ್ನು ಕರ್ತವ್ಯದಿಂದ ಅಮಾನತ್ತು ಗೋಳಿಸಿರುತ್ತಾರೆ.

ನಂತರ ಬಿ.ಇ.ಓ ರವರು ಘಟನೆ ಕುರಿತು ಡಿ.ಡಿ.ಪಿ.ಐ ರಾಯಚೂರು ರವರಿಗೆ ವರದಿ ಮಾಡಿದ್ದು ಸದರಿ ವರದಿ ಆಧಾರದ ಮೇಲೆ ಡಿ.ಡಿ.ಪಿ.ಐ ರಾಯಚೂರು ರವರು ಸದರಿಯವರ ವಿರುದ್ಧ ಕ್ರೀಮಿನಲ್ ಪ್ರಕರಣ ದಾಖಲಿಸುವಂತೆ ದಿ.08-12-2017 ರಂದು ಬಿ.ಇ.ಓ ದೇವದುರ್ಗ ರವರಿಗೆ ಪತ್ರ ಮೂಲಕ ತಿಳಿಸಿರುತ್ತಾರೆ. ನಂತರ ಡಿ.ಡಿ.ಪಿ.ಐ ರವರಿಂದ ಮುಖ್ಯ ಕಾರ್ಯನಿರ್ವಾಹಕ ಆಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಯಚೂರು ಇವರಿಗೆ ವರದಿ ಮಾಡಿದ್ದು, ಸದರಿ ವರಧಿ ಆಧಾರದ ಮೇಲೆ ದಿ.29-12-2017 ರಂದು 24 ಗಂಟೆಗಳ ಒಳಗಾಗಿ ಕ್ರೀಮಿನಲ್ ಪ್ರಕರಣ ದಾಖಲಿಸುವಂತೆ ಟಿಪ್ಪಣಿಯಲ್ಲಿ ನಮೂಧಿಸಿ ಮೌಖಿಕ ಆದೇಶ ನೀಡಿದ್ದರಿಂದ ಅದೇ ದಿನ ನಾನು ಗಬ್ಬೂರು ಪೊಲೀಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ.

ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಜಂಟಿ ಖಾತೆಯ 4 ಬ್ಯಾಂಕ್ ಸ್ಟೇಟಮೆಂಟ್ ಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ವಿಜಯಕುಮಾರ್ ರವರು ಇಲಾಖೆಗೆ ನೀಡಿದ ದಿ.16-04-2016 ರ ಪತ್ರ ಮತ್ತು 2 ಪುಟದ ವರದಿಯ ಅಟೆಸ್ಟೆಡ್ ಪ್ರತಿಯನ್ನು ದೂರಿನೊಂದಿಗೆ ನೀಡಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪತ್ರವನ್ನು ನಿಪಿ-7 ಎಂದು, ತಪಾಸಣಾ ವರದಿಯನ್ನು ನಿಪಿ-8 ಎಂದು ಗುರುತಿಸಲಾಯಿತು.

ದಿ.30-12-2017 ರಂದು ಗಬ್ಬೂರು ಪೊಲೀಸರು ಸದರಿ ಶಾಲೆಯಲ್ಲಿ ಪಂಚರ ಸಮಕ್ಷಮ ಬೆಳಿಗ್ಗೆ 9-00 ರಿಂದ 10-00 ಗಂಟೆ ಅವಧಿಯಲ್ಲಿ ಪಂಚನಾಮೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದೇ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, 2 ನೇ ಆರೋಪಿ ಗೈರಾಜರಿದ್ದು, ಸದರಿ 2 ನೇ ಆರೋಪಿ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

**CC No.405/2023**
CW -1 PW-2

**<u>ಪಾಟೀ ಸವಾಲು:-</u>** ಆರೋಪಿತರ ಪರ ಶ್ರೀ. ಟಿ.ಎನ್ ವಕೀಲರು ಕಾಲಾವಕಾಶ ಕೇಳಿದ್ದು ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.